**ದಿನಾಂಕ:25.09.2013ರಂದು ಮಧ್ಯಾಹ್ನ 12.00 ಗಂಟೆಗೆ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೌನ್ಸಿಲ್ ಸಭಾಂಗಣದಲ್ಲಿ ನಿರ್ದೇಶಕರು, ಮಿಮ್ಸ್ ಮಂಡ್ಯರವರ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರುಗಳ ಸಭೆಯ ನಡಾವಳಿಗಳು.**

ನಿರ್ದೇಶಕರು ಮೇಲ್ಕಂಡ ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳನ್ನು ಸಭೆಗೆ ಸ್ವಾಗತಿಸಿದರು.

1) ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ ತಮ್ಮ ವಿಭಾಗಗಳಲ್ಲಿ ಪ್ರತಿ ತಿಂಗಳು ಎಲ್ಲಾ ಸಿಬ್ಬಂದಿಗಳನ್ನು ಸಭೆ ಕರೆದು, ಸಭೆಯ ನಡಾವಳಿಯನ್ನು ತಯಾರಿಸಿ ಸಂಸ್ಥೆಗೆ ತಪ್ಪದೆ ಕಳುಹಿಸಿಕೊಡಬೇಕೆಂದು ಈಗಾಗಲೇ ಸುತ್ತೋಲೆ ಹೊರಡಿಸಿದ್ದರೂ ಸಹ ಕೆಲವು ವಿಭಾಗದವರು ಹೊರತು ಪಡಿಸಿ ಉಳಿದ ವಿಭಾಗದವರಾರೂ ಸಭೆ ಕರೆಯದಿರುವುದುನ್ನು ನಿರ್ದೇಶಕರು ಎಲ್ಲಾ ವಿಭಾಗದ ಮುಖ್ಯಸ್ಥರಿಗೂ ತಿಳಿಸುತ್ತಾ, ಇನ್ನು ಮುಂದೆ ತಮ್ಮ ವಿಭಾಗದಲ್ಲಿ ತಪ್ಪದೆ ಸಭೆ ನಡೆಸಿ ನಡಾವಳಿಯನ್ನು ಕಛೇರಿಗೆ ತಪ್ಪದೆ ಸಲ್ಲಿಸಲು ಎಲ್ಲಾ ವಿಭಾಗ ಮುಖ್ಯಸ್ಥರಿಗೂ ನಿರ್ದೇಶಕರು ಸೂಚಿಸಿದರು.

2) ಸಂಸ್ಥೆಯ ಕಛೇರಿ ವತಿಯಿಂದ ಯಾವುದಾದರೂ ಸುತ್ತೋಲೆಗಳು ಬಂದರೆ ಅದರಲ್ಲಿ ಕೋರಿರುವ ಮಾಹಿತಿಯನ್ನು ಅಂತಿಮ ದಿನಾಂಕದೊಳಗೆ ಮಾಹಿತಿಯನ್ನು ಕಛೇರಿಗೆ ಸಲ್ಲಿಸದೆ ಕೆಲವು ವಿಭಾಗದ ಮುಖ್ಯಸ್ಥರುಗಳು ಬೇಜವಬ್ದಾರಿಯನ್ನು ತೋರಿಸುತ್ತಿರುವುದು ನಿರ್ದೇಶಕರ ಗಮನಕ್ಕೆ ಬಂದಿದ್ದು, ಇನ್ನೂ ಮುಂದೆ ಸಂಸ್ಥೆಯ ಕಡೆಯಿಂದ ಬಂದಂತಹ ಪತ್ರಗಳಿಗೆ ಅದರ ಅಂತಿಮ ದಿನಾಂಕದೊಳಗೆ ಸದರಿ ಮಾಹಿತಿಯನ್ನು ಸಲ್ಲಿಸುವಂತೆ ಎಲ್ಲಾ ವಿಭಾಗದ ಮುಖ್ಯಸ್ಥರಿಗೆ ನಿರ್ದೇಶಕರು ಸೂಚನೆ ನೀಡಿದರು.

3) ಸಂಸ್ಥೆಗೆ ಸಂಬಂಧಿಸಿದಂತೆ ಮಾಹಿತಿಗಳು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿಲಾಗಿದ್ದು, ಸಂಸ್ಥೆಗೆ ಸಂಬಂಧಿಸಿದ Government Orders, proceedings etc., ಮಾಹಿತಿಯನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿಲಾಗುವುದಾಗಿ ಎಲ್ಲಾ ವಿಭಾಗದ ಮುಖ್ಯಸ್ಥರಿಗೂ ತಿಳಿಸುತ್ತಾ ತಮ್ಮ ವಿಭಾಗಕ್ಕೆ ಒಳಪಡುವ ಸಿಬ್ಬಂದಿಗಳಿಗೆ ತಿಳಿಸಲು ನಿರ್ದೇಶಕರು ಸೂಚಿಸಿದರು.

4) ಬೋಧಕ ಆಸ್ಪತ್ರೆಯ ಹೊರರೋಗಿಗಳ ವಿಭಾಗದ ಮುಂಭಾಗ ಕರ್ತವ್ಯ ನಿರತ ವೈದ್ಯರ ಸೂಚನಾ ಫಲಕದಲ್ಲಿ ಕರ್ತವ್ಯ ನಿರತ ವೈದ್ಯರುಗಳು ಹೆಸರುಗಳನ್ನು ದಿನನಿತ್ಯ ನಮೂದಿಸದೆ ಇರುವುದು ಕಂಡುಬಂದಿದ್ದು, ಇನ್ನು ಮುಂದೆ ಕರ್ತವ್ಯ ನಿರತ ಎಲ್ಲಾ ವೈದ್ಯರುಗಳ ಹೆಸರನ್ನು ತಪ್ಪದೇ ಕಡ್ಡಾಯವಾಗಿ ಸೂಚನಾ ಫಲಕದಲ್ಲಿ ನಮೂದಿಸಲು ಬೋಧಕ ಆಸ್ಪತ್ರೆಯ ಎಲ್ಲಾ ವಿಭಾಗದ ಮುಖ್ಯಸ್ಥರಿಗೆ ನಿರ್ದೇಶಕರು ಸೂಚಿಸಿದರು

5) ಬೋಧಕ ಆಸ್ಪತ್ರೆಗೆ ಬರುವಂತಹ ರೋಗಿಗಳಿಗೆ ಹೊರರೋಗಿ ವಿಭಾಗದ ಕೊಠಡಿಗಳು ತಿಳಿಯುತ್ತಿಲ್ಲದಿರುವುದರಿಂದ ಕೊಠಡಿ ಸಂಖ್ಯೆಗಳ ಮಾಹಿತಿಯನ್ನು ನಮೂದಿಸುವಂತೆ ನಿರ್ದೇಶಕರು ವೈದ್ಯಕೀಯ ಅಧೀಕ್ಷಕರಿಗೆ ಸೂಚಿಸಿದರು.

6) ಸಂಸ್ಥೆಯ ಎಲ್ಲಾ ವಿಭಾಗದ ಕುಂದು ಕೊರತೆಗಳ ಬಗ್ಗೆ ಸಂಸ್ಥೆಗೆ ಪತ್ರವನ್ನು ಬರೆದು ಸುಮ್ಮನೆ ಆಗುತ್ತಿದ್ದು, ಕೆಲಸಗಳು ನಿಧಾನಗತಿಯಲ್ಲಿ ನಡೆಯುತ್ತಿರುತ್ತವೆ. ಆದುದರಿಂದ ವಿಭಾಗಕ್ಕೆ ಸಂಬಂಧಪಟ್ಟ ಬರೆದ ಪತ್ರಗಳ ಬಗ್ಗೆ ಕ್ರಮವಹಿಸುವಂತೆ ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

7) ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಪ್ರಾಕ್ಟೀಸ್ ಮಾಡುತ್ತಿರುವ ಬಗ್ಗೆ ಮಾಹಿತಿಯನ್ನು ಸಂಸ್ಥೆಗೆ ಸಲ್ಲಿಸಲು ಈಗಾಗಲೇ ಸುತ್ತೋಲೆ ಹೊರಡಿಸಿದ್ದು, ಕೇಲವು ವೈದ್ಯರುಗಳು ಸುಳ್ಳು ಮಾಹಿತಿಯನ್ನು ನೀಡಿರುತ್ತಾರೆ. ಈ ಬಗ್ಗೆ ವಿಭಾಗದ ಮುಖ್ಯಸ್ಥರುಗಳು ಎಚ್ಚರಿಕೆ ವಹಿಸಿ ಸರಿಯಾದ ಮಾಹಿತಿಯನ್ನು ಸಲ್ಲಿಸಲು ನಿರ್ದೇಶಕರು ಸೂಚಿಸಿದರು.

8) ಅನಸ್ತೀಸಿಯಾ ವಿಭಾಗದಿಂದ ಒ.ಟಿ ಕೊಠಡಿಯ ಕೆಲಸಗಳು ಕುಂಠಿತಗೊಂಡಿದ್ದು, ಇದರ ಬಗ್ಗೆ ಕ್ರಮವಹಿಸಲು ಅನಸ್ತೀಸಿಯಾ ವಿಭಾಗದ ಮುಖ್ಯಸ್ಥರಿಗೆ ತಿಳಿಸುತ್ತಾ, ಒ.ಟಿ ಬಗ್ಗೆ ಸರ್ಜಿಕಲ್ ವಿಭಾಗದ ಮುಖ್ಯಸ್ಥರುಗಳು ಚರ್ಚಿಸಿ ಒ.ಟಿ ಕೊಠಡಿಯು ಆದುನಿಕ ರೀತಿಯಲ್ಲಿ ಇರುವಂತೆ ಜವಬ್ದಾರಿ ವಹಿಸಲು ಸರ್ಜಿಕಲ್ ವಿಭಾಗದ ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

9) ಯಾವುದೇ ಸಮಯದಲ್ಲಿ ಎಂ.ಸಿ.ಐ ತಂಡದವರು ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ತಪಾಸಣೆಗೆ ಆಗಮಿಸುವುದರ ಬಗ್ಗೆ ಈಗಾಗಲೇ ತಿಳಿಸಿದ್ದು, ತಮ್ಮ ವಿಭಾಗದ ಮೂಲಭೂತ ಸೌಕರ್ಯಗಳನ್ನು ಸಿದ್ಧವಾಗಿರಿಸಿಕೊಳ್ಳಬೇಕೆಂದು ನಿರ್ದೇಶಕರು ಸಂಬಂಧಿಸಿದ ಎಲ್ಲಾ ವಿಭಾಗದ ಮುಖ್ಯಸ್ಥರಿಗೆ ಹಾಗೂ ವೈದ್ಯಕೀಯ ಅಧೀಕ್ಷಕರಿಗೆ ಸೂಚಿಸಿದರು.

10) ಕೇಲವು ವಿಭಾಗದ ಮುಖ್ಯಸ್ಥರುಗಳು ತಮ್ಮ ತಮ್ಮ ವಿಭಾಗಕ್ಕೆ ಉಪಕರಣಗಳ ಅವಶ್ಯಕತೆಯಿರುವುದನ್ನು ಮನಗೊಂಡು ಇದರ ಬಗ್ಗೆ ಮುಂದಿನ ದಿನಗಳಲ್ಲಿ ಇ-ಟೆಂಡರ್ ಕರೆದು ಖರೀದಿಸಲಾಗುವುದು ಎಂಬ ಅಂಶವನ್ನು ನಿರ್ದೇಶಕರು ತಿಳಿಸಿದರು.

11) ಶರೀರಕ್ರೀಯಾಶಾಸ್ತ್ರ ವಿಭಾಗ ರವರು 150 ಫ್ಲೇಕ್ಸ್‌ನ ಅವಶ್ಯಕತೆಯಿರುವುದಾಗಿ ಹೇಳಿದರು ಇದರ ಬಗ್ಗೆ ನಿರ್ದೇಶಕರು ಸದರಿ ವಿಭಾಗದ ಮುಖ್ಯಸ್ಥರಿಗೆ ಮೊದಲು ಪೇಕ್ಸ್ ಹಾಕುವ ಸ್ಥಳಗಳನ್ನು ಪರಿಶೀಲಿಸಿ ಆನಂತರ ಎಷ್ಟು ಫ್ಲೇಕ್ಸ್‌ಗಳ ಅವಶ್ಯಕತೆಯಿರುವುದನ್ನು ತಿಳಿಸಲು ಸೂಚಿಸಿದರು.

12) ಎಲ್ಲಾ ವಿಭಾಗದ ಮುಖ್ಯಸ್ಥರುಗಳು ತಮ್ಮ ವಿಭಾಗಕ್ಕೆ ಸಂಬಂಧಪಟ್ಟಂತೆ ಬಂದಂತಹ ಪತ್ರಗಳನ್ನು ಗಮನಸದೆ Forward ಮಾಡುತ್ತಿದ್ದು, ಇನ್ನು ಮುಂದೆ ಬಂದಂತಹ ಪತ್ರಗಳನ್ನು ಗಮನಿಸಿ ಆನಂತರ ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸಿಕೊಡಲು ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

13) ಬೋಧಕ ಆಸ್ಪತ್ರೆಯ ಕೇಲವು ವೈದ್ಯರುಗಳು P.D.O ಮಾಡಿರುವುದಾಗಿ ತಿಳಿಸಿ ಇಷ್ಟಬಂದ ರೀತಿಯಲ್ಲಿ ಹೋಗುತ್ತಿರುವುದು ಗಮನಕ್ಕೆ ಬಂದಿದ್ದು ಇದರ ಬಗ್ಗೆ ವಿಭಾಗದ ಮುಖ್ಯಸ್ಥರು ಗಮನ ವಹಿಸಿ ರಾತಿವೇಳೆ ಕರ್ತವ್ಯ ನಿರ್ವಹಿಸಿದಂತ ವೈದ್ಯರುಗಳು ಮಾರನೇಯ ದಿನ ಮಧ್ಯಾಹ್ನ 1.00ರ ನಂತರ ತೆರಳಲು ಅನುಮತಿಯನ್ನು ನೀಡಬೇಕೆಂದು ತಿಳಿಸಿ P.D.O ಕರ್ತವ್ಯ ನಿರ್ವಹಿಸಿದ ವೈದ್ಯರುಗಳು ಇದರ ಬಗ್ಗೆ ಬೇಜವಬ್ದಾರಿಯಿಂದ ವರ್ತಿಸಿದರೆ ಅಂತವರಿಗೆ ನೋಟೀಸ್‌ನ್ನು ನೀಡಿ ಪ್ರತಿಯನ್ನು ಸಂಸ್ಥೆಗೆ ಕಳುಹಿಸಿಕೊಡಲು ವಿಭಾಗದ ಮುಖ್ಯಸ್ಥರುಗಳಿಗೆ ತಿಳಿಸಿದರು.

14) ಬೊಧಕ ಆಸ್ಪತ್ರೆಯ ಹೊರರೋಗಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳು ಮಧ್ಯಾಹ್ನದ ವೇಳೆಯಲ್ಲಿ ಕರ್ತವ್ಯಕ್ಕೆ 2.00ಕ್ಕೆ ಬದಲಾಗಿ 2.30ಕ್ಕೆ ಬರುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಸರಿಯಾದ ಸಮಯಕ್ಕೆ (ಬೆಳಿಗ್ಗೆ 9.00ರಿಂದ 1.00 ಮತ್ತು ಮಧ್ಯಾಹ್ನ 2.00 ರಿಂದ 4.00 ರ ತನಕ) ಕರ್ತವ್ಯಕ್ಕೆ ಬರಲು ಸುತ್ತೋಲೆಯನ್ನು ಹೊರಡಿಸಲು ವೈದ್ಯಕೀಯ ಅಧೀಕ್ಷಕರಿಗೆ ನಿರ್ದೇಶಕರು ಸೂಚಿಸಿದರು.

15) ಬೋಧಕ ಆಸ್ಪತ್ರೆಯ ಕೇಲವು ವೈದ್ಯರುಗಳಿ ಬೆಳಿಗ್ಗೆನ ಸಮಯದಲ್ಲಿ ತರಗತಿಗಳನ್ನು 8.00 ಗಂಟೆಗೆ ತೆಗೆದುಕೊಳ್ಳುವ ಬದಲು 8.30ಕ್ಕೆ ವಿಳಂಭವಾಗಿ ತೆಗೆದುಕೊಳ್ಳುತ್ತಿದ್ದು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುತ್ತದೆ ಹಾಗೂ ಹಾಜರಾತಿಯನ್ನು ಜ್ಯೂನಿಯರ್/ಸೀನಿಯರ್ ರೆಸಿಡೆಂಟ್‌ಗಳು ತೆಗೆದುಕೊಳ್ಳುತ್ತಿದ್ದು ಇನ್ನು ಮುಂದೆ ತರಗತಿ ತೆಗೆದುಕೊಂಡವರು ಹಾಜರಾತಿಯನ್ನು ತೆಗೆದುಕೊಳ್ಳಲು ಎಲ್ಲಾ ಮುಖ್ಯಸ್ಥರುಗಳಿಗೆ ತಮ್ಮ ಅಧೀನದಲ್ಲಿ ಬರುವ ವೈದ್ಯರುಗಳಿಗೆ ತಿಳಿಸಲು ನಿರ್ದೇಶಕರು ಸೂಚಿಸಿದರು.

16) ಸಂಸ್ಥೆಯ ವಿಭಾಗದ ಮುಖ್ಯಸ್ಥರುಗಳು ತಮ್ಮ ವಿಭಾಗದ ಕುಂದು ಕೊರತೆಗಳ ಬಗ್ಗೆ ನಿರ್ದೇಶಕರ ಹತ್ತಿರ ಚರ್ಚೆ ನಡೆಸಲು ವೈದ್ಯಕೀಯ ಅಧೀಕ್ಷಕರು ಮತ್ತು ಎಲ್ಲಾ ವಿಬಾಗದ ಮುಖ್ಯಸ್ಥರುಗಳಿಗೆ ಸೂಚಿಸಿದರು.

17) ಸಂಸ್ಥೆಯ ಕೇಲವು ವಿಭಾಗದ ಮುಖ್ಯಸ್ಥರುಗಳು ಸಂಸ್ಥೆಗೆ ಸರಬರಾಜು ಮಾಡಿದಂತಹ ಸರಬರಾಜುದಾರರಿಗೆ ಹಣವನ್ನು ಕೇಳುತ್ತಿರುವುದು ಗಮನಕ್ಕೆ ಬಂದಿದ್ದು ಇನ್ನು ಮುಂದೆ ಇಂತಹ ಘಟನೆಗಳು ಕಂಡುಬಂದರೆ ಅಂತಹವರಿಗೆ ಯಾವುದೇ ದಯೇ ಇಲ್ಲದೇ ನೋಟೀಸ್ ನೀಡುವುದಾಗಿ ನಿರ್ದೇಶಕರು ಎಚ್ಚರಿಕೆ ನೀಡಿದರು.

18) ಬೋಧಕ ಆಸ್ಪತ್ರೆಯ ಮುಖ್ಯಉಗ್ರಾಣ ಘಟಕಕ್ಕೆ ಆಗಿದ್ದಾಂಗೆ ಅನೀರಿಕ್ಷಿತ ಭೇಟಿಯನ್ನು ನೀಡಿ ಪರಿಶೀಲಿಸಲು ವೈದ್ಯಕೀಯ ಅಧೀಕ್ಷಕರಿಗೆ ನಿರ್ದೇಶಕರು ಸೂಚಿಸಿದರು.

19) ಬೋಧಕ ಆಸ್ಪತ್ರೆಯ ವಿಭಾಗದ ಮುಖ್ಯಸ್ಥರುಗಳು ತಮ್ಮ ವಿಭಾಗಕ್ಕೆ ಸಂಬಂಧಪಟ್ಟಂತಹ Indent/ ಪತ್ರಗಳು ಬಂದರೆ ಅದನ್ನು ಪರಿಶೀಲಿಸಿ ವೈದ್ಯಕೀಯ ಅಧೀಕ್ಷಕರಿಗೆ ಕಳುಹಿಸಿಕೊಡಲು ಸೂಚಿಸಿದರು. ಆನಂತರ ಅಲ್ಲಿಂದ ಬಂದಂತಹ Indent/ಪತ್ರಗಳನ್ನು ವೈದ್ಯಕೀಯ ಅಧೀಕ್ಷಕರು ಮತ್ತೊಮ್ಮೆ ಪರಿಶೀಲಿಸಿ ಆನಂತರ Forward ಮಾಡಲು ಹಾಗೂ ಅದಕ್ಕೆ ಏನೇ ಆದರೂ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ಮತ್ತು ವೈದ್ಯಕೀಯ ಅಧೀಕ್ಷಕರು ಜವಬ್ದಾರಿ ಎಂಬುದನ್ನು ನಿರ್ದೇಶಕರು ತಿಳಿಸಿದರು.

20) ಬೋಧಕ ಆಸ್ಪತ್ರೆಗೆ ಸಂಬಂಧಪಟ್ಟಂತೆ ಕ್ಲಿನಿಕಲ್ ವಿಭಾಗಗಳಲ್ಲಿ ಸಣ್ಣಪುಟ್ಟ ರಿಪೇರಿಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರಸಿ ಚರ್ಚಿಸಿ ನಂತರ ನಿರ್ದೇಶಕರಿಗೆ ತಿಳಿಸಲು ಸೂಚಿಸಿದರು.

ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.